ಲೆಕ್ಕವಿಲ್ಲದಷ್ಟು ಅಪ್ರಾಮಾಣಿಕ ಎಂಜಿನಿಯರಿಂಗ್ ಕಾಲೇಜುಗಳು ಭಾರತದಲ್ಲಿ ಪಾರ್ಥೇನಿಯಂನಂತೆ ತಲೆಯೆತ್ತುತ್ತಿವೆ. ಕಳೆದ ಎರಡು ದಶಕಗಳಿಂದ 'ಏನಾದರೂ ಆಗು, ಮೊದಲು ಎಂಜಿನಿಯರ್ ಆಗು' ಎಂಬಂತೆ ಎಲ್ಲರೂ ಎಂಜಿನಿಯರಿಂಗ್ ಮಾಡುವವರೇ! ಸಮಸ್ಯೆ ಎಂಜಿನಿಯರ್‌ಗಳ ಸಂಖ್ಯೆಯದಲ್ಲ, ಅವರ ಕೌಶಲ್ಯದ್ದು.

ಬಹಳಷ್ಟು ಜನರನ್ನು ಕಾಡುವ ಇನ್ನೊಂದು ಪ್ರಶ್ನೆಯಿದೆ. ಎಂಜಿನಿಯರಿಂಗ್ ಓದಿ ಕಾಮೆಡಿಯನ್ ಆಗುವುದು ಸರಿಯೇ? ಡಾಕ್ಟರ್ ಆದವಳು ಮನೆಯಲ್ಲಿ ಕೇಕು ಮಾಡುತ್ತಾ 'ಶೆಫ್' ಆಗುವುದು ಎಷ್ಟು ಸರಿ? ನನ್ನ ಪ್ರಕಾರ ಇದರಲ್ಲಿ ಸರಿ ತಪ್ಪಿನ ಪ್ರಶ್ನೆಯಿಲ್ಲ. ಪ್ರಾಯಶಃ ಡಾಕ್ಟರ್ ಆಗುವುದು, ಎಂಜಿನಿಯರ್ ಆಗುವುದು ಅವರ ಪೋಷಕರ ಕನಸಾಗಿತ್ತೋ ಏನೋ. ಈಗ ಇವರು ತಮ್ಮ ಕನಸಿನ ಹಾದಿ ಹಿಡಿದಿರಬಹುದು. ಭಾರತದಲ್ಲೂ ಈಗ ಪ್ರಸಿದ್ಧವಾಗುತ್ತಿರುವ 'ಸ್ಟಾಂಡ್ ಅಪ್ ಕಾಮಿಡಿ' ಎಂಬ 'ನೂತನ ವೃತ್ತಿ'ಯಲ್ಲಿ ಬಹುಪಾಲು ಕಾಮೆಡಿಯನ್‌ಗಳು (ಹಾಸ್ಯನಟ) ಎಂಜಿನಿಯರಿಂಗ್, ಡಾಕ್ಟರ್ ವೃತ್ತಿ ತೊರೆದು ಬಂದವರು. ರೋವನ್ ಅಟ್ಕಿನ್ಸನ್ (ಮಿಸ್ಟರ್ ಬೀನ್ ಪಾತ್ರಧಾರಿ) ಒಬ್ಬ ಎಲೆಕ್ಟ್ರಿಕಲ್ ಎಂಜಿನಿಯರ್.

'ನನ್ನ ಕನಸೇನು?' ಎಂದು ಬೇರೆಯವರನ್ನು ನೋಡಿ ನಿರ್ಧರಿಸುವುದು ಖಂಡಿತ ಸರಿ ಅಲ್ಲ. ಶಾಂತವಾಗಿ ನಮ್ಮ ಅಂತರಂಗದಲ್ಲಿ ನಿಶ್ಚಯವಾಗಿ ಹುದುಗಿಹೋದ ಕನಸುಗಳನ್ನು ಹುಡುಕಬಹುದು. ಆ ನೈಜ ಶಾಂತತೆ ನಮ್ಮಲ್ಲಿ ನಿರ್ಮಾಣವಾಗುವುದು ಬಹಳ ಕಷ್ಟ. ಬಹುಪಾಲು ಜನರು ತಮ್ಮ ಕನಸನ್ನು ಕಳೆದುಕೊಂಡಿರುವುದು ಅಂತರಂಗದೊಳಗೆ. ಆದರೆ, ಅವರು ಅದನ್ನು ಊರಲೆಲ್ಲಾ ಹುಡುಕುತ್ತ ಆಯುಷ್ಯ ದಂಡ ಮಾಡಿಕೊಳ್ಳುತ್ತಾರೆ. ಯಾವ ಕನಸು ನಮ್ಮನ್ನು ಹಗಲು ರಾತ್ರಿ ಬೆನ್ನುಬಿಡದೆ ಕಾಡುವುದೋ ಅದೇ ನಮ್ಮ ನಿಜವಾದ ಕನಸು. ಅದೇ ನಮ್ಮ ಒಳ ಧ್ವನಿ. ಯಾವ ಕೆಲಸದಲ್ಲಿ ನಮ್ಮ ಮನಸ್ಸು ಪೂರ್ತಿ ತೊಡಗುವುದೋ ಅದು ನಮ್ಮ ಕನಸು. ಈ ಕನಸಿನ ಕೆಲಸಕ್ಕೆ ಸಮಯದ ಕಟ್ಟುಪಾಡು ಇರುವುದಿಲ್ಲ. 'ಎಂಟು ತಾಸಾಯಿತೆ?' ಎಂದು ಪ್ರತಿ ದಿನ ಸಮಯ ನೋಡುತ್ತಿದ್ದರೆ ಅದು ನಮ್ಮ ಕನಸಿನ ಕೆಲಸ ಖಂಡಿತ ಅಲ್ಲ. ಹೊಟ್ಟೆಪಾಡಿಗೆ ಒಪ್ಪಿಕೊಂಡ ದುಮ್ಮಾನದ ದುಡಿತದ ಲಕ್ಷಣ ಅದು. ಆರ್ಥಿಕ ಪರಿಸ್ಥಿತಿಗೋಸ್ಕರ ಎಷ್ಟೋ ಬಾರಿ ನಮ್ಮ ಕನಸನ್ನು ಮುಚ್ಚಿಡಬೇಕಾಗಿ ಬರಬಹುದು. ಆದರೆ, ಮುಂದೆ ಜೀವನದಲ್ಲಿ ಆ ಕನಸನ್ನು ನಾವು ಖಂಡಿತ ಬೆನ್ನಟ್ಟಬೇಕು. ಆ ಕನಸಿನ ಹಾದಿಯಲ್ಲಿ ನಡೆದೆ ಎಂಬ ಖುಷಿಯಾದರೂ ಸಿಗುತ್ತದೆ. ಎಷ್ಟೋ ಬಾರಿ ಅವು ತಾತ್ಕಾಲಿಕ ಕನಸುಗಳೂ ಆಗಿರಬಹುದು. ಕೆಲವರು ಅಸಾಧ್ಯ ಕನಸೊಂದನ್ನು ಗುರಿಯಾಗಿಟ್ಟುಕೊಂಡಿರುತ್ತಾರೆ. ಏಕೆಂದರೆ, ಆ ಅಸಾಧ್ಯ ಕನಸಿನ ಬೆನ್ನೇರಿ ಹೊರಟಾಗ ಇನ್ನಾವುದಾದರೂ ಸಾಧ್ಯತೆಯ ದಾರಿ ಸಿಗುವುದು ಎಂಬುದು ಅವರ ನಂಬಿಕೆ. ಸಾಧಿಸಲಾಗದ ಕನಸೊಂದನ್ನು ಇಟ್ಟುಕೊಂಡು ನಡೆಯಲು ಶುರು ಮಾಡಿದರೆ ಆ ಪಯಣದಲ್ಲಿ ಎಷ್ಟೋ ಕನಸುಗಳು ನನಸಾಗಬಹುದು. ಅಸಾಧ್ಯ ಕನಸೊಂದು ನನಸಾಗಿಬಿಟ್ಟಿತು, ಮುಂದೇನು? ಇನ್ನೊಂದು ಕನಸಿನ ಹುಡುಕಾಟ!

ಮೊದಲೇ ಹೇಳಿದಂತೆ ನಾನೂ ಒಬ್ಬ ಎಂಜಿನಿಯರ್. ಇದು ನನ್ನ ಕನಸಾಗಿತ್ತೇ? ಎಂದು ನೀವು ಕೇಳಿದರೆ ಖಂಡಿತ ಆಗಿತ್ತು, ಯಾವಾಗ ಎಂದರೆ ಎಂಜಿನಿಯರಿಂಗ್‌ನ ಒಳಹೊಕ್ಕುವವರೆಗೆ. ನಂತರ ನಾನು ಬಿಸಿ ತುಪ್ಪ ಬಾಯಿಗೆ ಹಾಕಿಕೊಂಡಂತೆ ಹೇಗೋ ಎಂಜಿನಿಯರಿಂಗ್ ಮುಗಿಸಿದೆ. ಆದರೆ, ನನ್ನ ಸಾಫ್ಟ್‌ವೇರ್ ಕೆಲಸ ಖುಷಿ ಕೊಟ್ಟಿತ್ತು. ವೃತ್ತಿಯ ಆರಂಭದಲ್ಲೇ ಒಂದು ಆಂಡ್ರಾಯ್ಡ್ ಅಪ್ಲಿಕೇಶನ್ ಮೇಲೆ ಕೆಲಸ ಮಾಡಲು ಸಿಕ್ಕಾಗ ಬಹಳ ಆಸಕ್ತಿಯಿಂದ ಮಾಡಿದ್ದೆ. ಹೀಗೆ ನಾನಾ ಪ್ರಾಜೆಕ್ಟ್‌ನಲ್ಲಿ ಕೆಲಸ ಮಾಡಿದ ತೃಪ್ತಿ ಕೊಟ್ಟಿತು ಸಾಫ್ಟ್‌ವೇರ್. ನಂತರ ಮದುವೆ ಆಗಿ ದೇಶ ಬಿಟ್ಟು ಸೌದಿ ಅರೇಬಿಯಾಗೆ ಹೋದೆ. ಅಲ್ಲಿ ಮತ್ತೆ ನನ್ನಲ್ಲಿ ಹುಟ್ಟಿದ ಕನಸು ಕವಿಯಾಗುವುದು, ಕತೆಗಾರ್ತಿಯಾಗುವುದು.